# ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ರವರ ಕಾರ್ಯಾಲಯ, ಗುಬ್ಬಿ

**ದಿನಾಂಕಃ 26.06.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| | ಸತ್ಯ ಪ್ರತಿಜ್ಞೆಯ ಮೇರೆಗೆ |

## ಪಾಟೀ ಸವಾಲುಃ-ಪ್ರತಿವಾದಿ ಪರ ವಕೀಲರಾದ ಶ್ರೀ. ಕೆ ಜಿ ಎನ್ ರವರಿಂದ

ಚಿಕ್ಕರಂಗಯ್ಯ ನಿಮಗೆ ಏನಾಗಬೇಕು ಎಂದರೆ ಸಾಕ್ಷಿ ಚಿಕ್ಕಪ್ಪ ಎಂದು ನುಡಿಯುತ್ತಾರೆ. ನಿಮ್ಮ ಚಿಕ್ಕಪ್ಪನಾದ ಪ್ರತಿವಾದಿಯು ಈಗ ತೀರಿಕೊಂಡಿದ್ದಾರೆ ಎಂದರೆ ಸರಿ. ದಾವಾ ಅನುಸೂಚಿ ಸ್ವತ್ತು ಏನು ಎಂದರೆ ಸ.ನಂ.50/7 ಬಿ ರ 32 ಗುಂಟೆ ತೋಟ ಎಂದು ನುಡಿಯುತ್ತಾರೆ. ಸದರಿ ಜಮೀನು ತೋಟವಾಗಿರುತ್ತದೆ ಎಂದು ನೀವು ದಾವದಲ್ಲಿ ಬರೆಸಿದ್ದಿರಾ ಎಂದರೆ ಸಾಕ್ಷಿ ಬರೆಸಿದ್ದೇನೆ ಎಂದು ನುಡಿಯುತ್ತಾರೆ. ಸದರಿ ತೋಟದಲ್ಲಿ ಏನೆಲ್ಲಾ ಬೆಳೆ ಇರುತ್ತದೆ ಎಂದರೆ ಸಾಕ್ಷಿಯು ತೆಂಗು ಮತ್ತು ಅಡಿಕೆ ಮರಗಳು ಇರುತ್ತವೆ ಎಂದು ನುಡಿಯುತ್ತಾರೆ. ನೀವು ಯಾವ ಉದ್ದೇಶಕ್ಕಾಗಿ ಈ ದಾವೆಯನ್ನು ಸಲ್ಲಿಸಿದ್ದಿರಿ ಎಂದರೆ ಸಾಕ್ಷಿಯು ನನ್ನ ತಂದೆಯ ಹೆಸರಿನಲ್ಲಿರುವ ಜಮೀನನ್ನು ಪ್ರತಿವಾದಿ ಚಿಕ್ಕರಂಗಯ್ಯ ರವರ ಹೆಸರಿಗೆ ಮಾಡಿಕೊಂಡಿದ್ದಾರೆ ಹಾಗಾಗಿ ದಾವಾ ಸಲ್ಲಿಸಿದ್ದೇನೆ ಎಂದು ನುಡಿಯುತ್ತಾರೆ. ದಾವಾ ಅನುಸೂಚಿ ಸ್ವತ್ತು ಮೂಲತಃ ನಿಮ್ಮ ತಾತನಾದ ದೊಡ್ಡಕಾಳಯ್ಯ ರವರಿಗೆ ಸೇರಿದ ಆಸ್ತಿ ಎಂದರೆ ಸರಿ. ದೊಡ್ಡಕಾಳಯ್ಯ ರವರಿಗೆ ಒಟ್ಟು ಎಷ್ಟು ಆಸ್ತಿಗಳು ಇದ್ದವು ಎಂದು ಹೇಳಲು ಅಗುತ್ತಾದಾ ಎಂದರೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದೊಡ್ಡಕಾಳಯ್ಯರವರಿಗೆ ರಂಗಯ್ಯ, ಭದ್ರಯ್ಯ, ಚಿಕ್ಕರಂಗಯ್ಯ, ಕೆಂಚಯ್ಯ ಎಂಬ 4 ಜನ ಮಕ್ಕಳು ಎಂದರೆ ಸರಿ. ನಿಮ್ಮ ತಾತನಿಗೆ ಸಂಬಂಧಪಟ್ಟ ಆಸ್ತಿಗಳನ್ನು ಅವರ 4 ಜನ

ಮಕ್ಕಳು ವಿಭಾಗ ಮಾಡಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಭಾಗದಲ್ಲಿ ನಿಮ್ಮ ತಂದೆಗೆ ಎಷ್ಟು ಆಸ್ತಿಗಳು ಬಂದಿದ್ದವು ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಸರ್ವೆ ಮಾಡಿರುವುದಿಲ್ಲ ಆದರೆ ಅವರೇ ಅನುಭವಿಸುತ್ತಿದ್ದರು ಎಂದು ನುಡಿಯುತ್ತಾರೆ. ನಿಮ್ಮ ತಾತನ ಆಸ್ತಿಯಲ್ಲಿ ನಿಮ್ಮ ತಂದೆಗೆ ಎಷ್ಟು ಎಕರೆ ಬಂದಿತ್ತು ಎಂದರೆ ಸಾಕ್ಷಿಯು ಒಂದು ಕಡೆ 32 ಗುಂಟೆ, ಮತ್ತೊಂದು 13 ವರೆ ಗುಂಟೆ, ಒಂದು 38 ಗುಂಟೆ ಬಂದಿತ್ತು ಎಂದು ನುಡಿಯುತ್ತಾರೆ. ಅವುಗಳ ಸ.ನಂಬರ್ ಹೇಳಲು ಅಗುತ್ತದಾ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ರಂಗಯ್ಯ, ಚಿಕ್ಕರಂಗಯ್ಯ ಮತ್ತು ಕೆಂಚಯ್ಯ ರವರಿಗೆ ಎಷ್ಟು ಆಸ್ತಿ ಹೋಗಿತ್ತು ಎಂದು ಹೇಳಲು ಅಗುತ್ತದಾ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ.

2. ನಿಮ್ಮ ತಂದೆ ಭದ್ರಯ್ಯ ರವರಿಗೆ ಎಷ್ಟು ಜನ ಮಕ್ಕಳು ಎಂದರೆ ಸಾಕ್ಷಿ 6 ಜನ ಎಂದು ನುಡಿಯುತ್ತಾರೆ. ಅವರು ಯಾರು ಎಂದರೆ ಸಾಕ್ಷಿಯು ಮೊದಲನೆ ರಂಗಯ್ಯ, ನಾನು ಎರಡನೇ ಮಗ, ಮೂರನೇ ಮಗ ಚಿಕ್ಕರಂಗಯ್ಯ, 4 ನೇ ಮರಿರಂಗಯ್ಯ, 5 ನೇ ಬಸವರಾಜು, 6 ನೇ ಕಾಳೇಗೌಡ ಎಂದು ನುಡಿಯುತ್ತಾರೆ. ನಿಮ್ಮ ತಂದೆಯ 6 ಜನ ಮಕ್ಕಳು ವಿಭಾಗ ಮಾಡಿಕೊಂಡಿದ್ದಿರಾ ಎಂದರೆ ಸಾಕ್ಷಿಯು ವಿಭಾಗ ಮಾಡಿಕೊಂಡಿಲ್ಲ ಆದರೆ ಸುಮ್ಮನೆ ಅಂಚಿಕೊಂಡು ಉಳಿಮೆ ಮಾಡಿಕೊಂಡು ತಿನ್ನುತ್ತಿದ್ದೇವೆ ಎಂದು ನುಡಿಯುತ್ತಾರೆ. ನಿಮ್ಮ ಅಣ್ಣ ತಮ್ಮಂದಿರು ಎಷ್ಟು ಎಷ್ಟು ಅಸ್ತಿಗಳನ್ನು ವಿಭಾಗ ಮಾಡಿಕೊಂಡಿದ್ದಿರಿ ಎಂದರೆ ದಾವಾ ಪತ್ರದಲ್ಲಿ ಮತ್ತು ಪ್ರಮಾಣ ಪತ್ರದಲ್ಲಿ ಹೇಳಿಲ್ಲ ಎಂದರೆ ಸರಿ. ನಿಮ್ಮ ತಂದೆಗೆ ಬಂದಿತ್ತು ಎಂದು ಹೇಳಲಾದ 32 ಗುಂಟೆಯ ಸ.ನಂಬರ್ ಏನು ಎಂದರೆ 50/7 ಬಿ ಎಂದು ನುಡಿಯುತ್ತಾರೆ. ಸ.ನಂ.50/7 ಬಿ ರಲ್ಲಿ 32 ಗುಂಟೆ ನಿಮ್ಮ ತಂದೆಗೆ ಬಂದಿತ್ತು ಎಂದು ತೋರಿಸುವ ಯಾವುದಾದರು ದಾಖಲಾತಿಯನ್ನು ನೀವು ನ್ಯಾಯಾಲಯಕ್ಕೆ ನೀಡಿದ್ದಿರಾ ಎಂದರೆ ಕೊಟ್ಟಿದ್ದೇನೆ ಎಂದು ನುಡಿಯುತ್ತಾರೆ. ನಿಮ್ಮ ತಂದಗೆ ಬಂದಿತ್ತು ಎಂದು ಹೇಳಲಾದ 13 ವರೆ ಗುಂಟೆ ಮತ್ತು 38 ಗುಂಟೆಗೆ ಸಂಬಂಧಿಸಿದ ಯಾವುದೇ ದಾಖಲಾತಿಯನ್ನು ನೀವು ನ್ಯಾಯಾಲಯಕ್ಕೆ ನೀಡಿಲ್ಲ ಎಂದರೆ ಸರಿ ಸಾಕ್ಷಿ ಮುಂದುವರೆದು ಅವುಗಳು

ಸರಿಯಾಗಿದ್ದವು ಆದ್ದರಿಂದ ನೀಡಿಲ್ಲ ಎಂದು ನುಡಿಯುತ್ತಾರೆ. ಆ 3 ಆಸ್ತಿಗಳು ಸರಿಯಾಗಿದೆಯೋ ಅಥವಾ ಇಲ್ಲವೋ ಎಂದು ಯಾವುದೇ ದಾಖಲಾತಿಗಳನ್ನು ನೀವು ನ್ಯಾಯಾಲಯಕ್ಕೆ ನೀಡಿಲ್ಲ ಎಂದರೆ ಸರಿಯಲ್ಲ. ಎಷ್ಟು ಎಷ್ಟು ಗುಂಟೆ ನಿಮಗೆ, ಚಿಕ್ಕರಂಗಯ್ಯ ಮತ್ತು ಬಸವರಾಜು ರವರಿಗೆ ಬಂದಿರುತ್ತದೆ ಎಂದರೆ ಸಾಕ್ಷಿಯು ಇನ್ನು ವಿಭಾಗ ಮಾಡಿಕೊಂಡಿಲ್ಲ ಆದರೆ ಸುಮ್ಮನೆ ಹಂಚಿಕೊಂಡು ಉಳಿಮೆ ಮಾಡುತ್ತಿದ್ದೆವು ಎಂದು ನುಡಿಯುತ್ತಾರೆ. ನಿಮ್ಮ ಅಣ್ಣ ತಮ್ಮಂದಿರನ್ನು ಹೊರತುಪಡಿಸಿ ನೀವು ಒಬ್ಬರೇ ಮಾತ್ರ ದಾವಾ ಸ್ವತ್ತಿನ ಮಾಲೀಕರು ಎಂದು ದಾವಾ ಸಲ್ಲಿಸಿದ್ದಿರಿ ಎಂದರೆ ಸಾಕ್ಷಿಯು ನಾವು ಎಲ್ಲಾ ಅಣ್ಣ ತಮ್ಮಂದಿರ ಜೊತೆ ಮಾತನಾಡಿಯೇ ಈ ದಾವಾ ಸಲ್ಲಿಸಿದ್ದೇನೆ ಎಂದು ನುಡಿಯುತ್ತಾರೆ. ನೀವು ಒಬ್ಬರೇ ದಾವಾ ಸಲ್ಲಿಸಿದ್ದರೂ ಕೂಡ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದಿರಿ ಎಂದರೆ ಸರಿಯಲ್ಲ.

3. ನಿಮ್ಮ ತಾತನಿಗೆ ಸ.ನಂ.50/1, 50/8, 57/2, 14/6 ಜಮೀನುಗಳು ಇದ್ದವು ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಒಂದೇ ಬೌಂಡರಿಯಲ್ಲಿ ಇದ್ದವು ಎಂದು ನುಡಿಯುತ್ತಾರೆ. 1995 ರಲ್ಲಿ ನಿಮ್ಮ ತಂದೆ ಮತ್ತು ಅವರ ಸಹೋದರರು ದಾವಾ ಅನುಸೂಚಿ ಸ್ವತ್ತನ್ನು ಒಳಗೊಂಡಂತೆ ಕುಟುಂಬದ ಎಲ್ಲಾ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಭಾಗದಂತೆ ನಿಮ್ಮ ದೊಡ್ಡಪ್ಪ ರಂಗಯ್ಯ ರವರಿಗೆ ಸ.ನಂ.50/1 ರಲ್ಲಿ 20 ಗುಂಟೆ, 50/8 ರಲ್ಲಿ 12 ವರೆ ಗುಂಟೆ, 50/8 ರಲ್ಲಿ 7 ವರೆ ಗುಂಟೆ, 57/2 ರಲ್ಲಿ 2 ಗುಂಟೆ, 14/6 ರಲ್ಲಿ 3 ವರೆ ಗುಂಟೆ ಮತ್ತು 14/6 ರಲ್ಲಿ 3 ಗುಂಟೆ ಜಮೀನು ಬಂದಿತ್ತು ಎಂದರೆ ಸರಿ. ಸದರಿ ಜಮೀನಿನ ಖಾತೆ ಪಹಣಿ ಬದಲಾವಣೆ ಆಗಿ ಈಗಲೂ ಕೂಡ ನಿಮ್ಮ ದೊಡ್ಡಪ್ಪನ ಮಕ್ಕಳೇ ಈ ಮೇಲ್ಕಂಡ ಜಮೀನಿನಲ್ಲಿ ಸ್ವಾಧೀನಾನುಭವದಲ್ಲಿ ಇದ್ದಾರೆ ಎಂದರೆ ಸಾಕ್ಷಿಯು ಅವರು ಮಾಡಿಸಿಕೊಂಡಿದ್ದಾರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

4. ನಿಮ್ಮ ತಂದೆ ಭದ್ರಯ್ಯರವರಿಗೆ 1995-96 ರ ವಿಭಾಗದಂತೆ ಸ.ನಂ.50/1 ರ 20 ಗುಂಟೆ, ಸ,ನಂ.50/8 ರ 34 ಗುಂಟೆ, 14/6 ರ 13 ಕಾಲು ಗುಂಟೆ ಬಂದಿತ್ತು

ಎಂದರೆ ನನಗೆ ಗೊತ್ತಿಲ್ಲ. ಈ ಮೇಲ್ಕಂಡ ಜಮೀನುಗಳಲ್ಲಿ ನಿಮ್ಮ ತಂದೆ ಖಾತೆ ಪಹಣಿ ಬದಲಾವಣೆ ಮಾಡಿಸಿಕೊಂಡು ಸ್ವಾಧೀನದಲ್ಲಿ ಇದ್ದು ನಂತರ ಅವರ 6 ಜನ ಮಕ್ಕಳು ಸ್ವಾಧೀನದಲ್ಲಿ ಇದ್ದಿರಿ ಎಂದರೆ ಸರಿ.

5. ನಿಮ್ಮ ಚಿಕ್ಕಪ್ಪ ಚಿಕ್ಕರಂಗಯ್ಯ ರವರಿಗೆ 1995-96 ರ ವಿಭಾಗದಂತೆ ಸ.ನಂ.50/7 ಎ ರಲ್ಲಿ 30 ಗುಂಟೆ, 50/7 ಬಿ ರಲ್ಲಿ 32 ಗುಂಟೆ, 14/6 ಲ್ಲಿ 13 ಕಾಲು ಗುಂಟೆ ಬಂದಿತ್ತು ಎಂದರೆ ಸಾಕ್ಷಿಯು ಸ.ನಂಬರ್ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

6. ನಿಮ್ಮ ಇನ್ನೊಬ್ಬ ಚಿಕ್ಕಪ್ಪ ಕೆಂಚಯ್ಯರವರಿಗೆ 1995-96 ರ ವಿಭಾಗದಂತೆ ಸ.ನಂ.50/1 ರ 10 ಗುಂಟೆ, 50/7 ಎ ರಲ್ಲಿ 22 ಗುಂಟೆ, 14/6 ರಲ್ಲಿ 13 ಕಾಲು ಗುಂಟೆ ಬಂದಿತ್ತು ಎಂದರೆ ಸರಿ. ಖಾತೆ ಪಹಣಿಯನ್ನು ಅವರು ಬದಲಾವಣೆ ಮಾಡಿಕೊಂಡು ನಂತರ ಅವರ ಮಕ್ಕಳು ಸ್ವಾಧೀನಾನುಭವದಲ್ಲಿ ಇದ್ದಾರೆ ಎಂದರೆ ಸರಿ. ತಾವು ಮಾಡಿಕೊಂಡ ವಿಭಾಗದಂತೆ ರಂಗಯ್ಯ, ಭದ್ರಯ್ಯ, ಚಿಕ್ಕರಂಗಯ್ಯ ಮತ್ತು ಕೆಂಚಯ್ಯ ರವರ ಹೆಸರಿಗೆ ಎಂ ಅರ್ ನಂ.18/1995-96 ರಂತೆ ಖಾತೆ ಬದಲಾವಣೆ ಆಗಿರುತ್ತದೆ ಎಂದರೆ ದಾವಾ ಅನುಸೂಚಿ ಸ್ವತ್ತಿನಲ್ಲಿ ನಾನು ಅನುಭವದಲ್ಲಿ ಇದ್ದೇನೆ ಆದರೆ ಅದರ ಖಾತೆ ನಮ್ಮ ಹೆಸರಿಗೆ ಆಗಿರುವುದಿಲ್ಲ, ಪ್ರತಿವಾದಿಯು ತನ್ನ ಹೆಸರಿಗೆ ದಾವಾ ಸ್ವತ್ತಿನ ಖಾತೆಯನ್ನು ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಪ್ರತಿವಾದಿಯು ದಾವಾ ಅನುಸೂಚಿ ಸ್ವತ್ತಿನ ಖಾತೆಯನ್ನು ತನ್ನ ಹೆಸರಿಗೆ ಮಾಡಿಕೊಂಡಿದ್ದಾನೆ ಎನ್ನುವ ವಿಚಾರ 4 ವರ್ಷದ ಹಿಂದೆ ಗೊತ್ತಾಗಿರುತ್ತದೆ ಎಂದು ನುಡಿಯುತ್ತಾರೆ. ದಾವಾ ಅನುಸೂಚಿ ಸ್ವತ್ತು ನಿಮ್ಮ ತಂದೆಯ ಭಾಗಕ್ಕೆ ಬಂದಿರಲಿಲ್ಲ ಎಂದರೆ ಸರಿಯಲ್ಲ. ಸದರಿ ಸ್ವತ್ತು ಪ್ರತಿವಾದಿಯ ಭಾಗಕ್ಕೆ ಬಂದಿತ್ತು ಎಂದರೆ ಸರಿಯಲ್ಲ. ದಾವಾ ಸ್ವತ್ತು ಪ್ರತಿವಾದಿಯ ಭಾಗಕ್ಕೆ ಬಂದಿದ್ದರಿಂದ ಅವರು ದಾವಾ ಸ್ವತ್ತಿನ ಖಾತೆ ಮತ್ತು ಪಹಣಿಯನ್ನು ತಮ್ಮ ಹೆಸರಿಗೆ ಮಾಡಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ದಾವಾ ಅನುಸೂಚಿ ಸ್ವತ್ತಿನ ಮೇಲೆ ನಿಮಗೆ ಯಾವುದೇ ಹಕ್ಕು, ಅಧಿಕಾರ, ಹಿತಾಸಕ್ತಿ, ಸ್ವಾಧೀನಾನುಭವ ಇಲ್ಲದೇ ಇದ್ದರೂ ಕೂಡ ಮತ್ತು ಯಾವುದೇ ದಾಖಲಾತಿಗಳು

ನಿಮ್ಮ ಹೆಸರಿನಲ್ಲಿ ಇಲ್ಲದೇ ಇದ್ದರೂ ಕೂಡ ಪ್ರತಿವಾದಿಯರಿಗೆ ತೊಂದರೆ ನೀಡುವ ಉದ್ದೇಶದಿಂದ ಈ ಸುಳ್ಳು ದಾವಾವನ್ನು ಸಲ್ಲಿಸಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದಿರಿ ಎಂದರೆ ಸರಿಯಲ್ಲ.

6. 4 ವರ್ಷಗಳ ಹಿಂದೆ ಖಾತೆ ಮತ್ತು ಪಹಣಿ ಪ್ರತಿವಾದಿ ಹೆಸರಿಗೆ ಆಗಿದೆ ಎಂದು ನಿಮಗೆ ಗೊತ್ತಾಗಿರುತ್ತದೆ ಎಂದು ಹೇಳಿದ ತಕ್ಷಣಕ್ಕೆ ನೀವು ಸದರಿ ಖಾತೆ ಮತ್ತು ಪಹಣಿಯನ್ನು ಪ್ರಶ್ನೆ ಮಾಡಿ ಸಂಬಂಧಪಟ್ಟ ಪ್ರಾಧಿಕಾರದ ಮುಂದೆ ಅಪೀಲು ಸಲ್ಲಿಸಿದ್ದಿರಾ ಎಂದರೆ ರಾಜೀ ಮಾಡಿಕೊಳ್ಳುತ್ತೇವೆ ಎಂದು ಹೇಳಿ ಬಂದಿರಲಿಲ್ಲ ಹಾಗಾಗಿ ಸದರಿ ದಾಖಲಾತಿಗಳನ್ನು ಪ್ರಶ್ನೆ ಮಾಡಲು ಆಗಿರಲಿಲ್ಲ ಎಂದು ನುಡಿಯುತ್ತಾರೆ. ದಾವಾ ಅನುಸೂಚಿ ಸ್ವತ್ತಿನಲ್ಲಿ 30 ವರ್ಷಗಳಿಂದಲೂ ಪ್ರತಿವಾದಿ ಮತ್ತು ಅವರ ಮಕ್ಕಳು ಸ್ವಾಧೀನಾನುಭವದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಇಷ್ಟು ವರ್ಷಗಳಲ್ಲಿ ನೀವು ದಾವಾ ಅನುಸೂಚಿ ಸ್ವತ್ತಿಗೆ ಸಂಬಂಧಿಸಿದಂತೆ ಯಾವಗಲಾದರೂ ಕಂದಾಯ ಕಟ್ಟಿದ್ದಿರಾ ಎಂದರೆ ಸಾಕ್ಷಿಯು ನನ್ನ ತಂದೆ ಇದ್ದಾಗ ಕಟ್ಟುತ್ತಿದ್ದರೂ ನಾನು ಕಟ್ಟಿರುವುದಿಲ್ಲ ಈಗ ಕಟ್ಟಿಸಿಕೊಳ್ಳುತ್ತಿಲ್ಲ ಎಂದು ನುಡಿಯುತ್ತಾರೆ. ನಿಮ್ಮ ತಂದೆ ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಕಂದಾಯ ಕಟ್ಟಿದ್ದರೂ ಎಂದು ತೋರಿಸುವ ದಾಖಲಾತಿಗಳನ್ನು ನೀವು ನ್ಯಾಯಾಲಯಕ್ಕೆ ನೀಡಿದ್ದಿರಾ ಎಂದರೆ ಸಾಕ್ಷಿಯು ಸದರಿ ದಾಖಲಾತಿಗಳು ಹಿಂದಿನ ದಾಖಲಾತಿಗಳಾಗಿದ್ದು ಅವು ನಮ್ಮ ಬಳಿ ಇರುವುದಿಲ್ಲ ಎಂದು ನುಡಿಯುತ್ತಾರೆ. ದಾವಾ ಅನುಸೂಚಿ ಸ್ವತ್ತಿನ ಮೇಲೆ ನಿಮಗೆ ಮತ್ತು ನಿಮ್ಮ ತಂದೆಗೆ ಯಾವುದೇ ಹಕ್ಕು ಅಧಿಕಾರ ಇಲ್ಲದೇ ಇರುವುದರಿಂದಲೇ, ನೀವು ಯಾವುದೇ ಕಂದಾಯ ಪಾವತಿ ಮಾಡಿರುವುದಿಲ್ಲ ಮತ್ತು ನಿಮ್ಮ ಹೆಸರಿನಲ್ಲಿ ಯಾವುದೇ ಕಂದಾಯ ದಾಖಲಾತಿಗಳು ಇಲ್ಲದೇ ಇರುವ ಕಾರಣಕ್ಕೆ ನೀವು ಅವುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನೀವು ನಿಮಗೆ ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಯಾವುದೇ ವಿಚಾರ ಗೊತ್ತಿಲ್ಲದೇ ಇದ್ದರೂ ಕೂಡ ಪ್ರತಿವಾದಿಗಳು ಸ್ವಾಧೀನದಲ್ಲಿ ಇದ್ದರೂ ಕೂಡ ಅವರಿಗೆ ತೊಂದರೆ ನೀಡುವ ಉದ್ದೇಶದಿಂದ ನೀವು ದಾವಾ ಸ್ವತ್ತಿನಲ್ಲಿ ಸ್ವಾಧೀನದಲ್ಲಿ ಇದ್ದಿರಿ ಎಂದು ಹೇಳಿ ಕೊಂಡು

ಸುಳ್ಳು ದಾವಾವನ್ನು ಸಲ್ಲಿಸಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದಿರಿ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**ಓ . ಹೇ. ಕೇ. ಸರಿ. ಇದೆ**

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,
ಗುಬ್ಬಿ

Pw1 present he is cross examined by defendant counsel fully .

Defendant counsel prays time for cross of Pw2.

Call on.25.11.2024.